# ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ

ನಂದಿನಗರ, ಅಂಚೆ ಪೆಟ್ಟಿಗೆ ಸಂ. 6, ಬೀದರ – 585 401, ಕರ್ನಾಟಕ

**ಕುಲಸಚಿವರ ಕಛೇರಿ**

**Phone** : 08482 – 245241
**Fax** : 08482 – 245360
**Email** : regkvafsu@gmail.com


ಸಂಖ್ಯೆ:ಕುಸ/ಶೈಕ್ಷಣಿಕ/ಪಸಂ–ಡಿಪ್ಲೋಮಾ–ಪ್ರವೇಶ/2018–2019 ದಿನಾಂಕ: 08.06.2018

## ಅಧಿಸೂಚನೆ

**ವಿಷಯ:–** 2018–2019ನೇ ಶೈಕ್ಷಣಿಕ ಸಾಲಿನ ಪಶುಸಂಗೋಪನಾ ಡಿಪ್ಲೋಮಾ ಪ್ರವೇಶ ಕುರಿತು.

**ಉಲ್ಲೇಖ:–** 1. ವಿಸ್ತರಣಾ ನಿರ್ದೇಶಕರ, ಶಿಫಾರಸ್ಸು ಸಂಖ್ಯೆ:ವಿನಿ/ಶೈಕ್ಷಣಿಕ/ಪಸಂ–ಡಿಪ್ಲೋಮಾ–ಪ್ರವೇಶ/2018–2019 ದಿನಾಂಕ: 07.06.2018

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 08.06.2018

* * *

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ವ್ಯಾಪ್ತಿಯಲ್ಲಿ 2018–19ನೇ ಶೈಕ್ಷಣಿಕ ಸಾಲಿಗೆ ಪಶುಸಂಗೋಪನೆಯಲ್ಲಿ 2 ವರ್ಷ ಅವಧಿಯ ಡಿಪ್ಲೋಮಾ ಕೋರ್ಸಿನ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸುವ ಕುರಿತು.

**1. ಕೋರ್ಸಗಳ ವಿವರ:**

| ಕ್ರ.ಸಂ | ಕೋರ್ಸಗಳು | ವಿದ್ಯಾರ್ಹತೆ | ಪಾಲಿಟೆಕ್ನಿಕ್ | ಲಭ್ಯವಿರುವ ಒಟ್ಟು ಸೀಟು |
|---|---|---|---|---|
| 01 | ಪಶುಸಂಗೋಪನಾ ಡಿಪ್ಲೋಮಾ | ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ/ ತತ್ಸಮಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು, ಮತ್ತು ಕಡ್ಡಾಯವಾಗಿ 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಮಾಡಿರಬೇಕು | 1) ಪಶುಸಂಗೋಪನಾ ಪಾಲಿಟೆಕ್ನಿಕ್, ಜಾನುವಾರು ಸಂಶೋಧನಾ ಹಾಗೂ ಮಾಹಿತಿ ಕೇಂದ್ರ, ಕೊನೆಹಳ್ಳಿ, ತಿಪಟೂರ ತಾಲ್ಲೂಕು, ತುಮಕೂರು ಜಿಲ್ಲೆ | **50** |
| | | | 2) ಪಶುಸಂಗೋಪನಾ ಪಾಲಿಟೆಕ್ನಿಕ್, ಕುನ್ನೂರು, ಶಿಗ್ಗಾಂವ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ | **50** |
| | | | 3) ಪಶುಸಂಗೋಪನಾ ಪಾಲಿಟೆಕ್ನಿಕ್, ಕೊರವಂಗಲ ಕ್ರಾಸ್, ಹಾಸನ ಜಿಲ್ಲೆ | **50** |
| | | | 4) ಪಶುಸಂಗೋಪನಾ ಪಾಲಿಟೆಕ್ನಿಕ್, ಬರ್ಗಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ | **50** |
| | | | 5) ಪಶುಸಂಗೋಪನಾ ಪಾಲಿಟೆಕ್ನಿಕ್, ಡೋರ್ನಳ್ಳಿ, ಶಾಹಪೂರ ತಾಲ್ಲೂಕು, ಯಾದಗಿರ ಜಿಲ್ಲೆ | **50** |

**ವಯೋಮಿತಿ:** ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ 09–07–2018 ದಂದು ಅಭ್ಯರ್ಥಿಯ ವಯಸ್ಸು 20 ವರ್ಷ ಮೀರಿರಬಾರದು.

**ವಸತಿ ಸೌಕರ್ಯ:**

- ಪಶುಸಂಗೋಪನಾ ಪಾಲಿಟೆಕ್ನಿಕ್, ಜಾನುವಾರು ಸಂಶೋಧನಾ ಹಾಗೂ ಮಾಹಿತಿ ಕೇಂದ್ರ, ಕೊನೆಹಳ್ಳಿ, ತಿಪಟೂರ ತಾಲ್ಲೂಕು, ತುಮಕೂರು ಜಿಲ್ಲೆ ಇಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ವಸತಿ ಸೌಲಭ್ಯ ಇರುತ್ತದೆ.
- ಪಶುಸಂಗೋಪನಾ ಪಾಲಿಟೆಕ್ನಿಕ್, ಬರ್ಗಿ ಫಾರ್ಮ್, ಗುಂಡ್ಲುಪೇಟೆ (ಚಾಮರಾಜನಗರ) / ಕೊರವಂಗಲ ಕ್ರಾಸ್, (ಹಾಸನ) / ಡೋರ್ನಳ್ಳಿ, ಶಾಹಾಪುರ (ಯಾದಗಿರಿ) / ಕುನ್ನೂರು, ಶಿಗ್ಗಾಂವ, ಹಾವೇರಿ ಜಿಲ್ಲೆ ಇವುಗಳಲ್ಲಿ ಸೀಮಿತ ವಸತಿ ಸೌಕರ್ಯ ಲಭ್ಯವಿರುತ್ತದೆ.

**ಭೋಧನಾ ಮಾಧ್ಯಮ:**

- ಪಶುಸಂಗೋಪನಾ ಡಿಪ್ಲೋಮಾದ ತರಗತಿಗಳನ್ನು ಕನ್ನಡ ಮಾಧ್ಯಮದಲ್ಲಿ ನಡೆಸಲಾಗುವುದು.

**ಪು.ತಿ.ನೊ…2.**

**ಶಿಷ್ಯ ವೇತನ:**

- ಪ್ರವೇಶ ಪಡೆದ ಎಲ್ಲಾ ಅಭ್ಯರ್ಥಿಗಳಿಗೆ ರೂ.1000/-ಗಳ ಮಾಸಿಕ ಶಿಷ್ಯ ವೇತನವನ್ನು ವ್ಯಾಸಂಗದ ಅವಧಿಯಲ್ಲಿ ನಿಯಮಾನುಸಾರ ನೀಡಲಾಗುವುದು.

**ಅರ್ಜಿಯೊಂದಿಗೆ ಸಲ್ಲಿಸಬೇಕಾದ ಅಡಕಗಳು:**

- ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ (www.kvafsu.edu.in)ನಲ್ಲಿ ದಿನಾಂಕ 09-06-2018 ರಿಂದ ಪಡೆಯಬಹುದು.
- ಅರ್ಜಿಯೊಂದಿಗೆ ಡಿ.ಡಿ. (ಓರಿಜಿನಲ್)ಯನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು. ಡಿ.ಡಿ. ಲಗತ್ತಿಸದ ಅರ್ಜಿಯನ್ನು ತಿರಸ್ಕರಿಸಲಾಗುವುದು.

**<u>ಡಿ.ಡಿ ಮಾಹಿತಿ</u>**

| ಸಾಮಾನ್ಯ | ಪ.ಜಾ/ಪ.ಪ. ಅಭ್ಯರ್ಥಿಗಳಿಗೆ | ಡಿ.ಡಿ.ಇವರ ಹೆಸರಿನಲ್ಲಿ ಸಲ್ಲಿಸಬೇಕು |
|---|---|---|
| ರೂ.300/- | ರೂ.150/-<br>(ಜಾತಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ಸಲ್ಲಿಸಬೇಕು) | ಹಣಕಾಸು ನಿಯಂತ್ರಣಾಧಿಕಾರಿಗಳು, ಕಪಪಮೀವಿವಿ., ಬೀದರ<br>(**The Comptroller, KVAFSU, Bidar**) |

- ಅರ್ಜಿಯಲ್ಲಿ ಕೇಳಲಾದ ಎಲ್ಲಾ ಅಗತ್ಯ ಮಾಹಿತಿ ಹಾಗೂ ಅಡಕಗಳೊಂದಿಗೆ ಭರ್ತಿಮಾಡಿದ ಅರ್ಜಿಯನ್ನು ನಿಗದಿತ ಶುಲ್ಕದೊಂದಿಗೆ **ದಿನಾಂಕ: 09.07.2018**ರ ಒಳಗಾಗಿ **"ಕುಲಸಚಿವರು, ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ನಂದಿನಗರ, ಅಂಚೆ ಪೆಟ್ಟಿಗೆ ಸಂ. 6, ಬೀದರ – 585 401"** ಇವರ ಕಛೇರಿಗೆ ಸಲ್ಲಿಸುವುದು. ಸದರಿ ಕಡೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**<u>ಅರ್ಜಿಯೊಂದಿಗೆ ಲಗತ್ತಿಸಬೇಕಾದ ಪ್ರಮಾಣ ಪತ್ರಗಳು:</u>**

- ಎಸ್.ಎಸ್.ಎಲ್.ಸಿ, ಅಂಕ ಪಟ್ಟಿ.
- 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿದ **"ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ"**, (ನಿಗದಿತ ದಿನಾಂಕದ ಒಳಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸಹಿ ಹಾಗೂ ಮೊಹರ ಹೊಂದಿರಬೇಕು).
- ಮೀಸಲಾತಿ ಬಯಸುವ ಅಭ್ಯರ್ಥಿಯು ಸಂಬಂಧಪಟ್ಟ ಪ್ರಾಧಿಕಾರದಿಂದ ಸೂಕ್ತವಾದ ಜಾತಿ ಪ್ರಮಾಣ ಪತ್ರ.
- ಅನುಚ್ಛೇದ 371(ಜೆ) ರಂತೆ ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಾಗಿದ್ದರೆ ಸೂಕ್ತವಾದ ಪ್ರಮಾಣ ಪತ್ರ. (ಪ್ರಮಾಣ ಪತ್ರವನ್ನು ಸಹಾಯಕ ಆಯುಕ್ತರವರಿಂದ ಪಡೆಯತಕ್ಕದ್ದು).

**ಸೂಚನೆಗಳು:**

- ಅಭ್ಯರ್ಥಿಗಳು ಮೊಬೈಲ್ ನಂಬರ / ದೂರವಾಣಿ / ಇ-ಮೇಲ್ ಐಡಿಯನ್ನು ಅರ್ಜಿಯಲ್ಲಿ ಭರ್ತಿ ಮಾಡತಕ್ಕದ್ದು.
- ಅಭ್ಯರ್ಥಿಗಳು ಒಂದು ಬಾರಿ ಮಾತ್ರ ಅರ್ಜಿಯನ್ನು ಸಲ್ಲಿಸಬೇಕು ಹಾಗೂ ಸಲ್ಲಿಸಿದ ನಂತರ ಯಾವುದೇ ಕಾರಣಕ್ಕೂ ಅರ್ಜಿಯನ್ನು ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ.
- ಒಂದು ವೇಳೆ ಅರ್ಜಿ ಸಲ್ಲಿಸಿ, (ಡಿ.ಡಿ. ಓರಿಜಿನಲ್) ರೂಪಕ **ಶುಲ್ಕ ಪಾವತಿಸದಿದ್ದಲ್ಲಿ**, ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
- ಅರ್ಜಿ ಸಲ್ಲಿಸುವ ಪ್ರಾರಂಭ ದಿನಾಂಕ: **09.06.2018**
- ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: **09.07.2018**
- ಸರ್ಕಾರದ ಆದೇಶಗಳ ಅನ್ವಯ ಸೀಟುಗಳನ್ನು ಭರ್ತಿ ಮಾಡಲಾಗುವುದು, ಅರ್ಹ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯನ್ನು ಅಳವಡಿಸಿ ನೇರ ಮೌಖಿಕ ಸಂದರ್ಶನವನ್ನು ಬೆಂಗಳೂರದಲ್ಲಿ ನಡೆಸಲಾಗುವುದು.
- ನೇರ ಮೌಖಿಕ ಸಂದರ್ಶನಕ್ಕೆ ಅರ್ಹತೆ ಪಡೆದ ಅಭ್ಯರ್ಥಿಯ ಪಟ್ಟಿಯನ್ನು ದಿನಾಂಕ **24.07.2018** ರಂದು ವಿಶ್ವವಿದ್ಯಾಲಯದಲ್ಲಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.
- ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿ ಅಭ್ಯರ್ಥಿಗೆ ಪ್ರತ್ಯೇಕವಾಗಿ ಮಾಹಿತಿಯನ್ನು ತಿಳಿಸುವುದಿಲ್ಲ. ನೇರ ಮೌಖಿಕ ಸಂದರ್ಶನವನ್ನು ದಿನಾಂಕ **30.07.2018** ರಂದು ಬೆಳ್ಳಗ್ಗೆ **10.00** ಗಂಟೆಗೆ ಪಶು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರದಲ್ಲಿ ನಡೆಸಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳು ಸಂದರ್ಶನದ ವೇಳೆ ನಿಗದಿತ (ಸಾಮಾನ್ಯ/ಇತರೆ ವರ್ಗ ರೂ. **4600/- ಮತ್ತು** ಎಸ್‌ಸಿ/ಎಸ್‌ಟಿ/ಪ್ರ.ವರ್ಗ-1 ರೂ. 1045/-) ಶುಲ್ಕವನ್ನು (Fees) ಕಡ್ಡಾಯವಾಗಿ ಅಂದೇ "ಹಣಕಾಸು ನಿಯಂತ್ರಣಾಧಿಕಾರಿಗಳು, ಕಪಪಮೀವಿವಿ., ಬೀದರ" ಇವರ ಹೆಸರಿನಲ್ಲಿ ಡಿ.ಡಿ. ಮೂಲಕ ಸಂದಾಯ ಮಾಡಬೇಕು. ಇಲ್ಲಿ ಪ್ರವೇಶಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ಆಯಾ ಪಶು ಸಂಗೋಪನಾ ಡಿಪ್ಲೋಮಾ ಕಾಲೇಜುಗಳಲ್ಲಿ ದಿನಾಂಕ: **31.08.2018** ರೊಳಗೆ ಪ್ರವೇಶ ಪಡೆಯಬೇಕು. ಸದರಿ ದಿನಾಂಕದೊಳಗೆ ಪ್ರವೇಶಾತಿ ಪಡೆಯದೆ ಇರುವ ಅಭ್ಯರ್ಥಿಗಳ ಪ್ರವೇಶಾತಿಯು ರದ್ದಾಗುವುದು.

**ಪು.ತಿ.ನೊ...3.**

- ಮೊದಲನೆಯ ಸೆಮಿಸ್ಟರ್ ತರಗತಿಗಳ ಪ್ರಾರಂಭದ ದಿನಾಂಕ: **01.09.2018.**
- ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೆ ವಿಳಂಬ ಮಾಡದೇ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

| ***ಪ್ರವೇಶ ಪ್ರಕ್ರಿಯೆಯ ವಿವರ*** | ***ದಿನಾಂಕ*** |
|---|---|
| ಅಧಿಸೂಚನೆ | **09.06.2018** |
| ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ | **09.07.2018** |
| ಅರ್ಜಿ ಪರಿಶೀಲನೆ (ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರನಲ್ಲಿ) | **16.07.2018 ರಿಂದ 21.07.2018** |
| ವಿಶ್ವವಿದ್ಯಾಲಯದ (www.kvafsu.edu.in) ಅಂತರಜಾಲದಲ್ಲಿ ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | **24.07.2018** |
| ನೇರ ಮೌಖಿಕ ಸಂದರ್ಶನ (ಕೌನ್ಸೆಲಿಂಗ್) (ಅಭ್ಯರ್ಥಿಗಳು ಅರ್ಜಿಯೊಂದಿಗೆ ಲಗತ್ತಿಸಿದ ಎಲ್ಲಾ ಮೂಲ ದಾಖಲೆಗಳೊಂದಿಗೆ ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು ಇಲ್ಲಿ ಕಡ್ಡಾಯವಾಗಿ ಸಾದರಪಡಿಸುವುದು. ಒಂದು ವೇಳೆ ಮೂಲದಾಖಲಾತಿಗಳನ್ನು ಯಾವುದೇ ಕಾರಣಕ್ಕಾಗಿ ಸಾದರಪಡಿಸದಿದ್ದಲ್ಲಿ ಹಾಗೂ ಶುಲ್ಕ ಪಾವತಿಸದಿದ್ದಲ್ಲಿ, ಅಭ್ಯರ್ಥಿಗಳಿಗೆ ಪ್ರವೇಶಕ್ಕೆ ಪರಿಗಣಿಸಲಾಗುವುದಿಲ್ಲ) | **30.07.2018** |
| ಆಯ್ಕೆಯಾದ ಅಭ್ಯರ್ಥಿಗಳು ಸಂಬಂಧ ಪಟ್ಟ ಪಶು ಸಂಗೋಪನೆ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಿಗೆ ಮೂಲ ದಾಖಲಾತಿಗಳೊಂದಿಗೆ ಸಂಪರ್ಕಿಸತಕ್ಕದ್ದು | **31.08.2018 (ಕೊನೆಯ ದಿನಾಂಕ)** |
| ಶೈಕ್ಷಣಿಕ ವರ್ಷದ ಆರಂಭ | **01.09.2018** |

**ಕುಲಸಚಿವರು**